ಆ) ಬಾರದಿದ್ದಲ್ಲಿ ಈಗಲಾದರೂ ಗಣನೆಗೆ ತಂದುಕೊಂಡು ಕೈಗಾರಿಕಾ ಘಟಕಗಳಿಗೆ ಇಲ್ಲದ ಅತೀ ಕಡಿಮೆ ಪ್ರಮಾಣದಲ್ಲಿ ವಿದ್ಯುತ್ ಸರಬರಾಜಾಗುತ್ತಿರುವ ಕೊಡಗು ಜಿಲ್ಲೆಗೆ ನಿಲುಗಡೆ ಅವಧಿಯನ್ನು ಈಗಿನ ಅರ್ಧ ಅವಧಿಯಲ್ಲಿ ನಿಲುಗಡೆ ಮಾಡಿ ರೈತರಿಗೆ ಅನುಕೂಲ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು):-

ಆ) ಬಂದಿದೆ.

ಆ) ರೈತರಿಗೆ ಅನುಕೂಲ ಮಾಡುವ ಉದ್ದೇಶದಿಂದಲೂ ಹಾಗೂ ಕಾಫಿ ಪಲ್ಪಿಂಗ್ ಸೀಸನ್ ಆದ್ದರಿಂದಲೂ ವಿದ್ಯುತ್ ಸರಬರಾಜಿನ ನಿಲುಗಡೆಯನ್ನು ಸಂಪೂರ್ಣವಾಗಿ ಸಡಿಲಿಸಲಾಗಿದೆ.

ಗುಲ್ಬರ್ಗಾ ಜಿಲ್ಲೆಯ ಗೌರವ ಶಿಕ್ಷಕರ ಸೇವೆಯನ್ನು ಮುಂದುವರಿಸುವುದು

426(943). ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ):- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಗುಲ್ಬರ್ಗಾ ಜಿಲ್ಲೆಯ ಶಿಕ್ಷಕರ ಕೊರತೆಯನ್ನು ಪರಿಗಣಿಸಿ ಮಂಡಲ ಪಂಚಾಯಿತಿಯವರು 1988ನೇ ಸಾಲಿನಲ್ಲಿ ಗೌರವ ಶಿಕ್ಷಕರೆಂದು ನೇಮಕಾತಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇವರಿಗೆ ಪ್ರತಿ ತಿಂಗಳು 100-300 ರೂಪಾಯಿಗಳವರೆಗೆ ಗೌರವ ಧನವೆಂದು ನೀಡಿದರೆ ಇವರ ಜೀವನೋಪಾಯ ಸಾಗಬಹುದೇ?

ಇ) 30-12-1991ರಂದು ನಡೆದ ಜಿಲ್ಲಾ ಪರಿಷತ್ ಸಾಮಾನ್ಯ ಸಭೆಯಲ್ಲಿ ಈ ಶಿಕ್ಷಕರಿಗೆ ಜಿಲ್ಲಾ ಪರಿಷತ್ ನಿಂದ ದಿನಗೂಲಿ ನೌಕರರಿಗೆ ಕೊಡುವ ಕನಿಷ್ಟ ವೇತನವನ್ನು ಕೊಡಲು ನಿರ್ಣಯಿಸಿದ್ದಕ್ಕೆ ಸರ್ಕಾರ ಅನುಮತಿ ನೀಡಿರುವುದೇ?

ಈ) ಒಂದು ವೇಳೆ ನೀಡಿಲ್ಲವೆಂದರೆ ಈಗಲಾದರೂ ಅನುಮತಿ ನೀಡಿ ಆ ಬಡ ಶಿಕ್ಷಕರ ಜೀವನೋಪಾಯಕ್ಕಾಗಿ ಅನುಕೂಲ ಯಾವಾಗ ಮಾಡಿಕೊಡಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು):-

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ವಿಶೇಷವಾಗಿ ಸುರಪುರ ಹಾಗೂ ಜೇವರ್ಗಿ ತಾಲ್ಲೂಕಿನ ಮಂಡಲ ಪಂಚಾಯಿತಿಯವರು 148 ಅಭ್ಯರ್ಥಿಗಳನ್ನು ಗೌರವ ಶಿಕ್ಷಕರೆಂದು ನೇಮಕಾತಿ ಮಾಡಿಕೊಂಡಿರುತ್ತಾರೆ.

ಆ) ನೇಮಕಾತಿ ಕಾನೂನು ಬಾಹಿರವಾಗಿದೆ. ಇದಕ್ಕೆ ಸರ್ಕಾರವು ಹೊಣೆಯಲ್ಲ.

ಇ) ಇಲ್ಲ

ಈ) ಮಾಡಲಾಗುವುದಿಲ್ಲ.

ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ವಿದ್ಯುಚ್ಛಕ್ತಿ ಮಂಡಲಿಯ ನೌಕರರ ಸಂಖ್ಯೆ

427(944). ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):- ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ವಿದ್ಯುಚ್ಛಕ್ತಿ ಮಂಡಲಿಯ ಉಪ ವಿಭಾಗಾಧಿಕಾರಿ ಕಾರ್ಯಾಲಯದಲ್ಲಿ ಒಟ್ಟು ಬೇಕಾಗಿರುವ ಘಟಕಾಧಿಕಾರಿಗಳ ಸಂಖ್ಯೆ ಎಷ್ಟು? ಹಾಗೂ ಅದರಲ್ಲಿ ಹಾಲಿ ಕೆಲಸ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು?